# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಹಿರೇಕೆರೂರು

ಸಿ.ಸಿ. ನಂಃ 676/2022

ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರುಃ - ಶೇಖಪ್ಪ ತಂದೆ ಚನ್ನಬಸಪ್ಪ ಚಿಕ್ಕೇರಿ

ವಯಸ್ಸುಃ - 52 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ನೂಲಗೇರಿ

ದಿನಾಂಕಃ 26-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿ ಘಟನಾ ಜಾಗೆಯ ಪಂಚನಾಮೆಯಲ್ಲಿ ತಾನು ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. 1 ವರ್ಷದ ಹಿಂದೆ ನೂಲಗೇರಿ ಗ್ರಾಮದ ಜಮೀನಿನಲ್ಲ ಪಿರ್ಯಾದಿದಾರ ಹಾಗೂ ಆರೋಪಿಗಳ ಮಧ್ಯ ಜಗಳವಾಗಿತ್ತು. ನಾನು ಹಾಗೂ ಚಾಸಾ-3 ಇದ್ದೇವು, ಆಗ ಪೋಲಿಸರು ಬಂದಿದ್ದರು. ಅಲ್ಲಿ ಕೂಡಿದ ಜನ ಗಲಾಟೆ ಇಲ್ಲೇ ಆಗಿದೆ ಎಂದು ತೋರಿಸಿರುತ್ತಾರೆ. ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಪೋಟೋ ತೆಗೆದುಕೊಂಡು ಬಂದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಕೋರಿಕೆಯನ್ನು ಮನ್ನಿಸಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 27-10-2021 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಮೇರೆಗೆ ನೂಲಗೇರಿ ಗ್ರಾಮದ ಸರ್ವೆ ನಂಃ 3/1 ಜಮೀನಿನಲ್ಲಿ ಪಂಚನಾಮೆಯನ್ನು ಮಾಡಿ ಓದಿ ಹೇಳಿ ಕೇಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎನ್ನುವುದು ನಿಜ.

**ಪಾಟೀ ಸವಾಲುಃ** ಆರೋಪಿಗಳ ಪರ ಶ್ರೀ. ಯೂ. ಬಿ. ಜೆ. ವಕೀಲರಿಂದಃ

ಆ ದಿನ ಪಂಚನಾಮೆ ಮಾಡಲು ನನ್ನನ್ನು ಯಾರು ಕರೆದಿಲ್ಲ. ಘಟನಾ ಸ್ಥಳದ ಚಕಬಂದಿಯನ್ನು ಹೇಳಲು ಆಗುವುದಿಲ್ಲ. ಪೋಲಿಸರಿಗೆ ಪಂಚನಾಮೆಯನ್ನು ನಾನು ಹೇಳಿ ಬರೆಸಿಲ್ಲ. ಪಂಚನಾಮೆಯನ್ನು ಯಾವ ತಾರೀಕು, ತಿಂಗಳ ಹಾಗೂ ಇಳವಿಯೆಂದು ಬರೆದಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ಓದಿ ಹೇಳಿಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿಗಳು ಹಾಗೂ ಪಿರ್ಯಾದಿದಾರರ ಮಧ್ಯ ಯಾವುದೇ ಗಲಾಟೆಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸಿ.ಸಿ. ನಂ: 676/2022
ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 3

ಸರಿಯಲ್ಲ. ಘಟನಾ ಸ್ಥಳ ಸರ್ಕಾರಿ ಜಾಗ ಎಂದರೆ ಸರಿಯಲ್ಲ. ಸರ್ಕಾರಿ ಜಾಗದಲ್ಲಿ ಬಹಳಷ್ಟು ತಿಪ್ಪಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸರ್ಕಾರಿ ಜಾಗವನ್ನು ಚಾಸಾ-4 ಒತ್ತುವರಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಾಗವನ್ನು ಬಿಡಿಸಬೇಕು ಎಂದು ಊರಿನವರು ಅರ್ಜಿಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಾಗವನ್ನು ಬಿಡಿಸುತ್ತಾರೆ ಎನ್ನುವ ಕಾರಣ ಆರೋಪಿಗಳ ಮೇಲೆ ಸುಳ್ಳು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ಪಂಚಾಯತಿ ಅಧ್ಯಕ್ಷ ಆಗಿದ್ದ ಎನ್ನುವುದು ನಿಜ. ನಾನು ಹಾಗೂ ಚಾಸಾ-4 ಬಹಳ ಸ್ನೇಹಿತರು ಎಂದರೆ ಸರಿಯಲ್ಲ. ಚಾಸಾ-4 ಹೇಳಿಕೊಟ್ಟಂತೆ ಇಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರೇಕೆರೂರು ಪೋಲಿಸ ಠಾಣೆಯಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಪೋಟೋ ತೆಗದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕ: 26-03-2024

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು